MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.46 | No:50 | ENGLISH DAILY | Subscription Yearly - Rs. - | MONDAY | 20-9-2021 |
|---|---|---|---|---|---|

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಆಮದು ತಡೆ, ಬಳಕೆ ಹೆಚ್ಚಳ ಅಡಿಕೆ ದರ ಹೆಚ್ಚಳ

ಕೇಂದ್ರ ಸರಕಾರದ ಬಿಗು ಆಮದು ತಡೆ ನೀತಿಯಿಂದ ಅಡಿಕೆ ಆಮದು ಇಳಿಕೆಯಾಗಿದ್ದು, ಆಮದು ಸುಂಕ ಹೆಚ್ಚಿರುವುದರಿಂದ ಅಡಿಕೆ ಆಮದು ಪರಿಣಾಮಕಾರಿಯಾಗಿ ನಿಯಂತ್ರಿತಗೊಂಡಿದೆಯೆನ್ನಲಾಗಿದೆ. ಕೋವಿಡ್ ನಂತರದ ಅವಧಿಯಲ್ಲಿ ಉತ್ತರ ಭಾರತದಿಂದ ಅಡಿಕೆಗೆ ಬೇಡಿಕೆ ಹೆಚ್ಚಳ ಹಾಗೂ ದೇಶೀ ಬಳಕೆ ಹೆಚ್ಚಳವಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಹೆಚ್ಚಿದ ಬಳಕೆಯಿಂದ ಉತ್ತರ ಭಾರತದ ವರ್ತಕರಲ್ಲಿ ದಾಸ್ತಾನು ಇಳಿಕೆಯಾಗಿರುವುದರಿಂದ ಮುಂದಿನ ಸೀಸನ್ ನ ಬೇಡಿಕೆ ಪೂರೈಸಲು ಅಲ್ಲಿನ ವರ್ತಕರಿಂದ ಹೆಚ್ಚಿನ ಬೇಡಿಕೆಯಿದೆನ್ನಲಾಗಿದೆ. ಹಿಂದಿನ ವರ್ಷ ಹಾಗೂ ಈ ವರ್ಷ ಅಧಿಕ ಮಳೆ ಹಾಗೂ ಪ್ರತಿಕೂಲ ಹವಾಮಾನದಿಂದ ಅಡಿಕೆ ಉತ್ಪಾದನೆ ಕಡಿಮೆಯಾಗಿರುವುದರಿಂದ ಪೂರೈಕೆ ಕಡಿಮೆಯಾಗಿದೆಯೆನ್ನಲಾಗಿದೆ. ಕ್ಯಾಂಪ್ಕೋ ಸಂಸ್ಥೆಯೂ ದರ ಇಳಿಕೆಯಾಗದಂತೆ ಎಚ್ಚರದ ನೀತಿಯನ್ನನುಸರಿಸುತ್ತಿದೆ. ಇದರಿಂದ ಮಾರುಕಟ್ಟೆಯಲ್ಲಿ ಅಡಿಕೆ ದರ ಹೆಚ್ಚಳವಾಗಿದೆ.